## ಊಟರಾಜ

ಶಾಲೆಗಳಿಗೆ ರಜೆ ಇರುವ ಕಾರಣ ಎರಡನೇ ತರಗತಿ ಓದುತ್ತಿರುವ ನಮ್ಮ ಮೊಮ್ಮಗಳು ದಿಯಾ 'ಮಹಾಭಾರತ' ಧಾರಾವಾಹಿ ನೋಡುತ್ತ ಕುಳಿತಿದ್ದಳು. ಧಾರಾವಾಹಿ ಮುಗಿದ ನಂತರ ನಾನು ಅವಳಿಗೆ ಭೀಷ್ಮ, ಯುಧಿಷ್ಠಿರ, ಭೀಮರಿಗೆ ಇರುವ ಪರ್ಯಾಯ ಹೆಸರು ಹೇಳುವಂತೆ ಕೇಳಿದೆ. ಅದಕ್ಕವಳು, 'ಭೀಷ್ಮ–ಗಾಂಗೇಯ', 'ಯುಧಿಷ್ಠರ–ಧರ್ಮರಾಜ', 'ಭೀಮ–ಗದಾಧರ ಮತ್ತು ಊಟರಾಜ' ಎಂದು ಹೆಸರಿಸಿದಳು. ಭೀಮನಿಗೆ 'ಊಟರಾಜ' ಎಂಬ ಹೆಸರು ಕೇಳಿ ನಾನು ಚಕಿತನಾದೆ. ಅದಕ್ಕವಳು, 'ತಾತಾ, ಭೀಮನ ಊಟದ ರೀತಿ ನೋಡಿದಿರಾ? ಹಿಡಿಂಬೆ ತಂದ ಫಲಗಳಲ್ಲಿ ಮುಕ್ಕಾಲು ಭಾಗ ಭೀಮನೇ ತಿಂದ. ಅದಕ್ಕೇ ಅವನಿಗೆ 'ಊಟರಾಜ' ಅಂತ ಹೆಸರಿಟ್ಟೆ' ಎಂದಳು.

**ಬಸವರಾಜ ಹುಡೇದಗಡ್ಡಿ**





## ಶಂಡರು!

ಬಹಳ ವರ್ಷಗಳ ಕೆಳಗೆ ನಾನು ತೀರ್ಥಹಳ್ಳಿಯಲ್ಲಿ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ನಡೆದ ಪ್ರಸಂಗ. ನಮ್ಮ ಕಚೇರಿಯಿಂದ ಅಂಚೆ ಕಚೇರಿಗೆ ಪ್ರತಿದಿನ ಸಾವಿರಾರು ಪತ್ರಗಳು ರವಾನೆಯಾಗುತ್ತಿದ್ದ ಕಾಲವದು. ಒಂದು ದಿನ ಅಂಚೆ ಪೇದೆ ನನ್ನ ಕೈಗೆ ಕೆಲವು ಪತ್ರಗಳನ್ನು ಕೊಟ್ಟು ಸಹಿ ಮಾಡಲು ಕೇಳಿದ. ಅವೆಲ್ಲ ವಿತರಣೆಯಾಗದೆ ಹಿಂದಕ್ಕೆ ಬಂದ ಪತ್ರಗಳು. ಕುತೂಹಲಕ್ಕೆ ಕಾರಣ ಏನಿರಬಹುದೆಂದು ಪತ್ರಗಳ ಹಿಂಭಾಗ ನೋಡಿದೆ. ಅಲ್ಲಿ 'ಶಂಡರಿಗೆ ಹಿಂದಿರುಗಿಸಲಾಗಿದೆ' ಎಂದು ಬರೆದಿತ್ತು. ಸ್ವಲ್ಪ ಸಮಯ ಯೋಚಿಸಿದ ನಂತರ ಅದು 'ಸೆಂಡರ್' ಎಂಬುದು ಅರ್ಥವಾಯಿತು. ಆದರೆ ಈ 'ಶಂಡರು' ಯಾರು? ಗ್ರಾಹಕರೋ? ಅಂಚೆ ಇಲಾಖೆಯೋ? ಅಥವಾ ನಮ್ಮ ಕಚೇರಿಯೋ? ತಿಳಿಯಲಿಲ್ಲ.

**ವಾ. ಮುರಳೀಧರ**